

- ಪುರುಷಪ್ರಧಾನ ಸರ್ವಾಧಿಕಾರವು ಸಮಾಜದ ಎಲ್ಲ ವಿಭಾಗಗಳ ಮೇಲೆ ತನ್ನ ಕಬಂಧಬಾಹು ವಿಸ್ತರಿಸಿ ಬಿಗಿಗೊಳಿಸಿದೆ.
- ಆರ್ಥಿಕ ಹೊರೆ, ಸಾಮಾಜಿಕ ಭಯ ಎಲ್ಲವೂ ಸೇರಿಕೊಂಡು ಅವಳನ್ನು ಬೆಂಕಿಯಿಂದ ಬಾಣಲೆಗೆ ಜಾರಿಸುವ ಪ್ರವೃತ್ತಿಯೂ ಎಲ್ಲೆಡೆ ವ್ಯಾಪಿಸುತ್ತಿದೆ.

ಈಚೆಗೆ ಬಾಲ ಗರ್ಭಿಣಿಯರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿರುವ ಅಂಶವೂ ಬೆಳಕಿಗೆ ಬಂದಿದೆ. ಬಾಲ್ಯ ವಿವಾಹ ತಡೆ ಕಾಯ್ದೆ ಇದ್ದಾಗಲೂ ಬಾಲ್ಯವಿವಾಹಗಳನ್ನು ಹೆತ್ತವರೇ ನಡೆಸುತ್ತಿದ್ದಾರೆ ಎಂಬುದು ಹೌದಲ್ಲವೇ? ಮುಂದೊಮ್ಮೆ ಮಕ್ಕಳು ತಮ್ಮ ಇಚ್ಛೆಯ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಭಯವೇನಾದರೂ ಕಾಡುತ್ತಿದೆಯೇ? ಅದರಲ್ಲಿಯೂ ಹೆಣ್ಣುಮಕ್ಕಳು ಹೊರೆಯಾಗುತ್ತಿದ್ದಾರೆಯೇ? ಆರ್ಥಿಕ ಹೊರೆ, ಸಾಮಾಜಿಕ ಭಯ ಎಲ್ಲವೂ ಸೇರಿಕೊಂಡು ಅವಳನ್ನು ಬೆಂಕಿಯಿಂದ ಬಾಣಲೆಗೆ ಜಾರಿಸುವ ಪ್ರವೃತ್ತಿಯೂ ಎಲ್ಲೆಡೆ ವ್ಯಾಪಿಸುತ್ತಿದೆ.

ಹುಬ್ಬಳ್ಳಿಯ ಇನಾಂವೀರಾಪುರದ ಗರ್ಭಿಣಿ ಮಗಳು ಮಾನ್ಯ ಎಂಬ ಹುಡುಗಿಯ ತಪ್ಪು ಏನಿದೆ? ಒಡಲಿನಲ್ಲಿ ಕೂಸು ಮಿಸುಕಾಡುತ್ತ ಸುಂದರ ಚಂದದ ಕನಸುಗಳನ್ನು ಕಟ್ಟಿಕೊಡುತ್ತಿರುವ ಹೊತ್ತಿನಲ್ಲಿ ಅವಳ ತಂದೆಯೇ, ಏಕಕಾಲಕ್ಕೆ ಮಗಳನ್ನೂ ಮತ್ತವಳ ಕನಸುಗಳನ್ನೂ, ಈ ಲೋಕಕ್ಕೆ ಬರಬೇಕಾದ ಎಳೆಗೂಸನ್ನೂ ಒಂದೇ ಏಟಿಗೆ ಹೊಡೆದು ಹಾಕಿದನು. ತಂದೆಯ ಕ್ರೌರ್ಯವನ್ನು ಎಷ್ಟೇ ಖಂಡಿಸಿದರೂ ಆ ಪ್ರದೇಶದಲ್ಲಿ ಯಾವ ಯುವಕ ಯುವತಿಯೂ ಅನ್ಯ ಜಾತಿಯಲ್ಲಿ ತನ್ನ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗದಂತಹ ಭಯವಂತೂ ಹುಟ್ಟಿಕೊಂಡಿರುತ್ತದೆ. ಇದು ಒಂದರ್ಥದಲ್ಲಿ ಕ್ರೌರ್ಯದ ಭಯೋತ್ಪಾದನೇ. ಈ ಭಯೋತ್ಪಾದನೆ ಹುಟ್ಟು ಹಾಕಿದವರನ್ನು ಹುಡುಕುತ್ತ ಹೊರಟರೆ 12ನೇ ಶತಮಾನದಲ್ಲಿನ ಪ್ರಕರಣವೂ ಕಣ್ಣ ಮುಂದೆ ಬರುವುದು.

12ನೇ ಶತಮಾನದಲ್ಲಿ ಶರಣಾದಿ ಪ್ರಥಮರು ಅನುಭವ ಮಂಟಪದಲ್ಲಿ ಚಿಂತನ ಮಂಥನ ನಡೆಸಿದರು. ಸಮಾಜವನ್ನು ಆಕ್ರಮಿಸಿಕೊಂಡಿರುವ ವರ್ಗ ವರ್ಣ ಲಿಂಗ ಜಾತಿಯ ತಾರತಮ್ಯವನ್ನು ಹುಟ್ಟು ಹಾಕಿರುವ ವೈದಿಕತೆಯ ವರ್ಣ ವ್ಯವಸ್ಥೆಯೆಂಬ ಜ್ವಾಲೆಯಿಂದ ಬಿಡಿಸಲು ಶ್ರಮಿಸಿದರು. ಅವೈಜ್ಞಾನಿಕ ಜಾತಿ ಪದ್ಧತಿಯ ವಿರುದ್ಧ ವಚನಗಳನ್ನು ರಚನೆ ಮಾಡಿದರು. ಎಲ್ಲ ರೀತಿಯ ತಾರತಮ್ಯವನ್ನು ಕಿತ್ತು ಹಾಕಿ ಸಮತೆಯ ಸಮಾಜವನ್ನು ಕಟ್ಟಲು ತೀರ್ಮಾನ ಮಾಡಿದರು. 'ನುಡಿದಂತೆ ನಡೆಯದಿರ್ದಡೆ ಹಿಡಿದಿರ್ಪ ಲಿಂಗ ಘಟಸರ್ಪ ನೋಡಾ' ಎಂದರಲ್ಲದೆ ಎಷ್ಟೇ ಅಡ್ಡಿ ಆತಂಕಗಳು ಎದುರಾದರೂ ನುಡಿದಂತೆ ನಡೆದರು. ಆದ್ದರಿಂದಲೇ ಭಿನ್ನ ಜಾತಿಯಿಂದ ಬಂದ ಹರಳಯ್ಯ ಮತ್ತು ಮಧುವರಸ ದಂಪತಿಗಳು ತಮ್ಮ ಮಕ್ಕಳ ಮದುವೆಯನ್ನು ಮಾಡಿದರು. ಜಾತಿಯನ್ನೇ ನಂಬದ ಚಪ್ಪಲಿ ಕಾಯಕದ ಹರಳಯ್ಯನ ಮಗನಿಗೂ ಬ್ರಾಹ್ಮಣ ಮೂಲದ (ಆದರೆ ಮಧುವರಸ ಲಿಂಗಾಯತ ತತ್ವವನ್ನು ಒಪ್ಪಿಕೊಂಡವರಾಗಿದ್ದನು) ಮಧುವರಸ ಮಗಳಿಗೂ ಮದುವೆ ನಡೆಯಿತು. ಇದರಿಂದ ವೈದಿಕಶಾಹಿ ವ್ಯವಸ್ಥೆಯಲ್ಲಿ ತಲ್ಲಣ ಶುರುವಾಯಿತು. ವರ್ಣ ವ್ಯವಸ್ಥೆಯನ್ನೇ ಹೀಗೆ ಬುಡಮೇಲು ಮಾಡಿದರೆ ಹೇಗೆ? ಆದ್ದರಿಂದ ಜಾತಿಯನ್ನು ತೊರೆದು ಮನುಷ್ಯರಂತೆ ಮದುವೆ ನಡೆದಿದ್ದಕ್ಕಾಗಿ ಅಂದಿಗೆ ಈ ಜಾತಿ ವ್ಯವಸ್ಥೆಯು ಹರಳಯ್ಯ ಮತ್ತು ಮಧುವರಸರ ಕಣ್ಣುಗಳನ್ನು ಕಿತ್ತು ಆನೆ ಕಾಲಿಗೆ ಕಟ್ಟಿ ಕಲ್ಯಾಣ ಪಟ್ಟಣದ ತುಂಬ ಎಳೆ ಹೂಟೆ ಮಾಡಿತು. ಕಲ್ಯಾಣದ ಪಟ್ಟಣದ ತುಂಬ ಯಾಕೆ ಎಳೆ ಹೂಟೆ ಮಾಡಲಾಯಿತೆಂದರೆ ಮುಂದಕ್ಕೆ ಯಾರೂ ಜಾತಿ ವ್ಯವಸ್ಥೆಯ ನಿಯಮಗಳನ್ನು ಮೀರಬಾರದು, ಅನ್ಯ ಜಾತಿಯಲ್ಲಿ ಮದುವೆಗಳು ಏರ್ಪಡಬಾರದೆಂಬ ಕಾರಣದಿಂದ ಈ ಕ್ರೂರ ಭಯೋತ್ಪಾದನೆ ಮಾಡಲಾಯಿತು.

ಹರಳಯ್ಯ ಮತ್ತು ಮಧುವರಸರ ಜೊತೆಗೆ ನಡೆದ ಕ್ರೌರ್ಯಕ್ಕೂ ಮತ್ತು ಹುಬ್ಬಳ್ಳಿಯ ಮಾನ್ಯ ಎಂಬ ಮಗಳ ಮೇಲೆ ನಡೆದ ಕ್ರೌರ್ಯಕ್ಕೂ ಏನು ವ್ಯತ್ಯಾಸ ಇದೆ? ಅಂದಿನಿಂದ ಇಂದಿನವರೆಗೂ ಹೆಣ್ಣನ್ನು, ದಲಿತರನ್ನು ಹೀಗೆ ಭಯೋತ್ಪಾದನೆಯಲ್ಲಿ ತಳ್ಳುವ ಹಿಂದಿನ ಕಾರಣಗಳೇನು? ಈ ರೀತಿಯ ದಾಳಿಗಳು ಅನ್ಯಜಾತಿ ಮತ್ತು ಧರ್ಮಗಳಿಗೆ ಮಾತ್ರ ಸೀಮಿತವಾಗಿದೆಯೆ ಎಂದರೆ ಇಲ್ಲ. ಯುವಜನರು ತಮ್ಮದೇ ಸಮುದಾಯದಲ್ಲಿ ತಮ್ಮ ಆಯ್ಕೆಯನ್ನು ಪ್ರಕಟಪಡಿಸಿದಾಗಲೂ ಇದನ್ನು ತಿರಸ್ಕರಿಸುವ ಅವರ ಆಯ್ಕೆಯ ಹಕ್ಕನ್ನು ಮೊಟಕುಗೊಳಿಸುವ ಮನೋಭಾವವು ಹೆತ್ತವರಲ್ಲಿ ಇರುವುದು ಅಲ್ಲಗಳೆಯಲಾಗದು.

## ಪ್ರಜಾಪ್ರಭುತ್ವೀಯವಲ್ಲದ ಕುಟುಂಬ ವ್ಯವಸ್ಥೆಯ ನರಳಾಟ

ನಮ್ಮ ಕುಟುಂಬಗಳು ಪ್ರಜಾಪ್ರಭುತ್ವೀಯ ನೆಲೆಯಲ್ಲಿ ರೂಪುಗೊಳ್ಳುವ ಬದಲಿಗೆ ಪಾಳೇಗಾರಿ ಮೌಲ್ಯಗಳ ಹಿಡಿತದಲ್ಲಿ ನರಳುತ್ತಿವೆ. ಕುಟುಂಬಕ್ಕೆ ಪುರುಷನೇ ಯಜಮಾನ. ಸಮಾಜವೇ ಪುರುಷಪ್ರಧಾನವಾಗಿ ತೆವಳುತ್ತಿರುವಾಗ ಕುಟುಂಬಗಳನ್ನೂ ಅದು ಪ್ರಭಾವಿಸುವುದು